> ನಾನೇ ಕೆ.ಟಿ. ಗಟ್ಟಿ ಎಂದು ಹೇಳಿಕೊಂಡು ಕರ್ನಾಟಕದಲ್ಲೆಲ್ಲ ಭಾಷಣ ಇತ್ಯಾದಿ ಬಿಗಿದು ಹಣ ಸಂಗ್ರಹಿಸಿದ ಒಬ್ಬ ಕೋಟಾ ಗಟ್ಟಿಯ ಬಗ್ಗೆ ನಿಮಗೆ ಗೊತ್ತೆ? ಕೆ.ಟಿ. ಗಟ್ಟಿಯವರಿಗೇ ಗೊತ್ತಿರಲಿಲ್ಲ ಬಿಡಿ. ಅವರಾಗ ಇಥಿಯೋಪಿಯಾದಲ್ಲಿ ಅವರ ಪಾಡಿಗೆ ಅವರಿದ್ದರು. ಸಾಹಿತಿಯ ಹೆಸರಿನಲ್ಲೂ ಹಣ ಹುಟ್ಟಿಸಬಲ್ಲ ಇಂಥ ಸ್ಟಾರ್‌ಗಿರಿ ಬಹುಶಃ ಕನ್ನಡದ ಇನ್ನೊಬ್ಬ ಲೇಖಕನಿಗಿದ್ದಿರಲಾರದು! ಈ ಕುಚೇಷ್ಟೆಯನ್ನೂ ಬಯಲಿಗೆಳೆದ ಹೆಗ್ಗಳಿಕೆ 'ಸುಧಾ' ವಾರಪತ್ರಿಕೆಯದು.

ಹೋಗುವುದು, ಆದ್ರೆ ಯಾವುದಾದರೊಂದು ರೀತಿಯಲ್ಲಿ ಫಿಕ್ಷನ್ ಆಗ್ತದೆ. ಆನಂತರ ಓದುಗರ ಪ್ರತಿಕ್ರಿಯೆ ಬಂದು ಗುಲ್ವಾಡಿಯವರು ಒಂದು ದಿವಸ, ನಾನಲ್ಲಿ ಮಣಿಪಾಲದಲ್ಲೆ ಇದ್ದೆ ಆಗ, ಅವರು ಹೇಳಿದ್ರು ಗಟ್ಟಿಯವರೆ ಹೀಗೀಗೆ ಪ್ರತಿಕ್ರಿಯೆ ಬರ್ತಾ ಉಂಟು, ನಮಗೆ ಬೇಸರ ಆಗ್ತಾ ಉಂಟು, ಅದನ್ನ ನಾವು ಏನು ಮಾಡ್ಬೇಕು, ಸ್ವಲ್ಪ ಸಂಕ್ಷಿಪ್ತ ಮಾಡ್ತೀರ. ನಾನ್ಹೇಳಿದೆ, ಸಂಕ್ಷಿಪ್ತ ಮಾಡ್ಲಿಕ್ಕೇನೂ ಸಾಧ್ಯ ಇಲ್ಲ. ನನಗೆ ಅಂಥ ಕ್ರಮವೇ ಗೊತ್ತಿಲ್ಲ. ಒಂದು ಕಾದಂಬರಿ ಒಂದ್ಸಲ ಬರೆದ್ರೆ, ನಿನ್ನ ಮಗುವಿನ ಮೂಗು ಸ್ವಲ್ಪ ಉದ್ದ ಇದೆ, ಕಟ್ ಮಾಡು ಅಂತ ಹೇಳಿದ್ರೆ, ನನ್ನಿಂದ ಆಗುವುದಿಲ್ಲ ಅದು. ಮತ್ತೆ ಅವರು ಸ್ವಲ್ಪ ನೋವನ್ನೂ ಕಾಣಿಸಿದ್ರು. ಅಲ್ಲ, ನನ್ನಿಂದಾಗಿ ಇವರ ಪತ್ರಿಕೆಗೆ ತೊಂದರೆ ಆಗ್ತದಲ್ಲಪ್ಪ! ನಿಲ್ಲಿಸಿಬಿಡಿ ಅಂತೇಳಿದ್ರೆ ನಿಲ್ಲಿಸ್ಲಿಕ್ಕೆ ಆಗುವುದಿಲ್ಲ. ಅದಾಗುವುದಿಲ್ಲ ಹೇಗಿದ್ರೂ. ದೊಡ್ಡ ರಾದ್ಧಾಂತ ಆಗ್ತದೆ ಅದು. ಆನಂತ್ರ ಅದನ್ನ ಏನ್ಮಾಡಿದೆ ಅಂತೇಳಿದ್ರೆ, ಸರಿ ಮಾಡ್ತೇನೆ ಅಂತೇಳಿ ಅದನ್ನ ತಗೊಂಡೋಗಿ ಅದ್ರಲ್ಲಿ ಒಂದು ಪಿನಾಕ ಅಂತ ಚಾಪ್ಟರ್ ಬರ್ತದೆ, ದೊಡ್ಡ ಚಾಪ್ಟರ್. ಅದೊಂದು ಸ್ವರ್ಗಲೋಕದ ಒಂದು ಕಲ್ಪನೆ ಬರ್ತದೆ, ವಿಚಿತ್ರವಾದ ಕಲ್ಪನೆ. ಅದನ್ನ, ಆ ಭಾಗ ಕತ್ತಿರಿಸಿ ಬಿಟ್ಟೆ ನಾನು. ಅಲ್ಲಿಂದ ಒಂದು ಲಾಸ್ಟ್ ಲೈನಿಗೆ ಲಿಂಕ್ ಕೊಟ್ಟು ಈಚೆಯ ಕತೆ ಮುಂದುವರಿಸಿದೆ. ಬಂತು. ಜನಗಳಿಗೆ ಏನು ಎಂತು ಗೊತ್ತಾಗ್ಲಿಲ್ಲ. ಓದ್ತಾ ಹೋದ ಜನಗಳು ಹೇಳಿದ್ರು, ಬಹಳ ಚೆನ್ನಾಗಿದೆ, ಬಹಳ ಚೆನ್ನಾಗಿದೆ. ಅಲ್ಲಿ ಗೊತ್ತಾಗ್ಲಿಕ್ಕೆ ಸುರುವಾಯ್ತು. ಈ ತಬಾರ ಅಂದ್ರೇನು, ಆಂ? ಲಿಂಕ್ ಸಿಕ್ಕಿತು. ಹಾಗೆ ಗುಲ್ವಾಡಿಯವರು ಹೇಳ್ತಿದ್ರು ಕಾದಂಬರಿ ತಕ್ಷಣ ಟೇಕಾಫ್ ಆಗ್ಬೇಕು ಅಂತ. ಆದ್ರೆ ಹಾಗೆ ಆಗುದಿಲ್ಲ ಅದು. ಟೇಕಾಫ್ ಆಗುವುದಕ್ಕೆ ಸ್ವಲ್ಪ ಸಮಯ ಹಿಡೀತದೆ. ಹಾಗೆ ಆಮೇಲದು ತುಂಬ ಜನಪ್ರಿಯವಾಯ್ತು, ಪ್ರಸಿದ್ಧವೂ ಆಯ್ತು. ಜನ ತುಂಬ ಇಷ್ಟಪಟ್ಟರು. ಮತ್ತೆ ಪುಸ್ತಕ ಬರುವಾಗ ಇದೆಲ್ಲ ಉಳಿದವರಿಗೆ ಗೊತ್ತಾಯ್ತು ಸ್ವಲ್ಪ. ಹೀಗೀಗೆ ಆಗಿದೆ. ಅಂದ್ರೆ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ ಅಂತಿದ್ರು. ಅವ್ರು ಪ್ರಕಟ ಮಾಡಿದ್ರು ಪುಸ್ತಕವನ್ನ. ಚೆನ್ನಾಗಿ ಮಾಡಿದ್ರು, ಬಹಳ ಚಂದ ಪುಸ್ತಕ ಮಾಡಿದ್ರು. ಅದರ ರಕ್ಷಾಪುಟ ಕಲಾವಿದ ಚಂದ್ರನಾಥ ಬರೆದಿದ್ದು, ಬಹಳ ಮಂದಿ ನೆನೆಸಿಕೊಳ್ತಾರೆ, ಅದ್ಭುತವಾದ ಮುಖಪುಟ. ಅವರು ಆರ್ಟ್‌ವರ್ಕ್ ಮಾಡಿದ್ರು. ನಂತರ ಅವರು ಒಂದು ವಾಕ್ಯ ಹಾಕಿದ್ರು, 'ಇದು ಸೆನ್ಸಾರ್ ಆದಂಥ ಆವೃತ್ತಿ ಅಲ್ಲ, ಪೂರ್ಣ ಕಾದಂಬರಿ' ಅಂತ